ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಟ್ ನೀರಿನ್ನು ಸಮುದ್ರಕ್ಕೆ ಬಿಡುತ್ತಿರುವುದು.

79(202) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯ ಕಾವೂರಿನ ಮುಲ್ಲಕಾಡಿನ ಡ್ರೈನೇಜ್ ಸ್ಥಾವರದಿಂದ ನೀರನ್ನು ತೆರೆದ ಕಾಲುವೆಯ ವ್ಯವಸ್ಥೆಯ ಮೂಲಕ ಸಮುದ್ರಕ್ಕೆ ಬಿಡುತ್ತಿರುವುದರಿಂದ ಜನರ ಆರೋಗ್ಯಕ್ಕೆ ಹಾನಿ ಎಂಬುದನ್ನು ಸರ್ಕಾರವು ಗಮನಿಸಿದೆಯೇ?

ಆ) ಆರೋಗ್ಯಕ್ಕೆ ಹಾನಿಕಾರಕವಾಗಿರುವ ಈ ವ್ಯವಸ್ಥೆಯನ್ನು ಬದಲಿಸಿ ಕೊಳವೆ ಮೂಲಕ ಸಮುದ್ರಕ್ಕೆ ನೀರನ್ನು ಬಿಡುವ ವ್ಯವಸ್ಥೆಯನ್ನು ಶೀಘ್ರವಾಗಿ ಸರ್ಕಾರವು ಮಾಡುವುದೇ?

ಇ) ಸ್ಥಳೀಯ ನಾಗರೀಕರು ಈ ಕುರಿತು ಎಷ್ಟು ಮನವಿಗಳನ್ನು ಸಲ್ಲಿಸಿದ್ದಾರೆ?

ಈ) ಈ ಸಮಸ್ಯೆಯ ಪರಿಹಾರಕ್ಕಾಗಿ ಯಾವ ಯೋಜನೆಯು ಸರ್ಕಾರದ ಮುಂದೆ ಇದೆ? ಯಾವಾಗ ಅದನ್ನು ವ್ಯವಸ್ಥೆಗೊಳಿಸಲಾಗುವುದು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) ಹೌದು

ಆ) ಈ ಸಮಸ್ಯೆಯನ್ನು ಪರಿಹರಿಸಲು ಏಷ್ಯ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ 35 ಕೋಟಿ ರೂಗಳ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಇ) 3 ಮನವಿಗಳು

ಈ) "ಆ" ನಲ್ಲಿ ಉತ್ತರಿಸಿರುವಂತೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರಿಗೆ ವಸತಿ ಶಾಲೆ.

81(220) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಸ್‌ಸಿ : ಎಸ್‌ಟಿ ಜನಾಂಗದವರ ಒಟ್ಟು ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ಒದಗಿಸುವುದು)